**1ನೇ ಹೆಚ್ಚುವರಿ ಜಿಲ್ಲಾ  ಹಾಗೂ ಸತ್ರ ನ್ಯಾಯಾಧೀಶರು ಬೆಳಗಾವಿ ಇವರ**

**ನ್ಯಾಯಾಲಯದಲ್ಲಿ ಬೆಳಗಾವಿ**

**SC. No: 96/2025**

CW. No: 10
**PW. No: 3**

| | | |
|---|---|---|
| ಸಾಕ್ಷಿದಾರರ ಹೆಸರು | : | ಈರನಗೌಡ ಪಾಟೀಲ |
| ತಂದೆಯ ಹೆಸರು | : | ಶಿವನಗೌಡ ಪಾಟೀಲ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ್ತವ್ಯ | : | ಬಲೋಗಾ ತಾಃ ಖಾನಾಪುರ |

ಇಂದು ದಿನಾಂಕಃ 23.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ -**

ನಾನು ಸಹಿ ಮಾಡಬಲ್ಲೆ. ನನ್ನ ಸಹಿ ಹಾಗೂ ನನ್ನ ಸಹಿ ಇರುವ ದಾಖಲೆ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು pendrive ಜಪ್ತಿ ಪಂಚನಾಮೆಯನ್ನು ಮತ್ತು ಅದರಲ್ಲಿಯ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ, pendrive ಪಂಚನಾಮೆಯನ್ನು ನಿಪಿ-32 ಎಂದು, ಸಾಕ್ಷಿಯ ಸಹಿಯನ್ನು ನಿಪಿ-32(ಎ) ಎಂದು ಗುರುತಿಸಲಾಯಿತು.

2. ನಿಪಿ-32 ಪಂಚನಾಮೆಯಲ್ಲಿ ನನ್ನ ಸಹಿಯನ್ನು ದಿನಾಂಕ 11.04.2025ರಂದು ಖಾನಾಪುರ ಪೋಲಿಸ ಠಾಣೆಯಲ್ಲಿ ಮಾಡಿರುತ್ತೇನೆ. ಆ ದಿನ ಪೋಲಿಸರು ನನ್ನ ಹಾಗೂ ಚಾಸಾ.11ರವರ ಸಮಕ್ಷಮ pendrive ಒಂದನ್ನು ಲ್ಯಾಪಟಾಪ ಒಂದರಲ್ಲಿ ಅಳವಡಿಸಿ ಅದನ್ನು ಓಪನ್ ಮಾಡಿ ಅದರಲ್ಲಿರುವ ವಿಡಿಯೋಗಳನ್ನು ನಮಗೆ ತೋರಿಸಿ ನಂತರ ಜಪ್ತಿ ಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ನಿಪಿ-32ರಂತೆ ಪಂಚನಾಮೆಯನ್ನು ತಯಾರಿಸಿರುತ್ತಾರೆ. ಸದರಿ pendrive ನ್ನು ಮತ್ತು ಅದರಲ್ಲಿರುವ ವಿಡಿಯೋವನ್ನು ನೋಡಿದರೆ ಗುರುತಿಸುತ್ತೇನೆ. ಸರ್ಕಾರಿ ಅಭಿಯೋಜಕರು ಸಾಕ್ಷಿಗೆ pendriveನ್ನು ತೆರೆದು ಅದನ್ನು ತೆರೆದ ನ್ಯಾಯಾಲಯದಲ್ಲಿ ಅಳವಡಿಸಿದ ಕಂಪ್ಯೂಟರ ಸಿಸ್ಟಮಗೆ ಅಳವಡಿಸಿ ಸಾಕ್ಷಿಗೆ ತೋರಿಸಲು ಅನುಮತಿ

ಕೋರಿದ್ದು, ಸಾಕ್ಷಿಯು ವಿಡಿಯೋವನ್ನು ನೋಡಿ ಗುರುತಿಸುವುದಾಗಿ ಹೇಳಿದ್ದರಿಂದ , ಕಾಗದದಲ್ಲಿ ಸುತ್ತಿ ಸೀಲು ಮಾಡಿದ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ಕತ್ತರಿಸಿ ತೆರೆದು ಅದರಲ್ಲಿರುವ pendriveನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು pendriveನ್ನು ಗುರುತಿಸಿದ್ದು, pendriveನಲ್ಲಿರುವ ವಿಡಿಯೋ ತುಣುಕುಗಳನ್ನು ಸಿಡಿಗೆ ಅಳವಡಿಸಿ ಸಿಡಿ ಪ್ರತಿಗಳನ್ನು ಈಗಾಗಲೇ ಆರೋಪಿ ಪರ ವಕೀಲರಿಗೆ ನೀಡಿದ್ದು, ಸದರಿ **pendriveನ್ನು ನಿಪಿ-33** ಎಂದು ಗುರುತಿಸಲಾಯಿತು.

3. Pendriveನಲ್ಲಿರುವ ವಿಡಿಯೋಗಳು ಬೆಳಗಾವಿಯ ನಿಯಾಜ್ ಹೋಟೆಲನಲ್ಲಿ ಶಿವನಗೌಡ ಮತ್ತು ರುದ್ರಪ್ಪ ಇವರು ಊಟ ಮಾಡುವುದು ಮತ್ತು ಪಾರ್ಸಲ ತೆಗೆದುಕೊಳ್ಳುವುದು ಇರುತ್ತದೆ. ಮತ್ತೊಂದು ವಿಡಿಯೋ ತುಣುಕಿನಲ್ಲಿ ಶಿವನಗೌಡ ಮತ್ತು ರುದ್ರಪ್ಪ ಇವರು ಹಿರೇಬಾಗೇವಾಡಿಯ ಪ್ರಗತಿ ವೈನ್ಸ ಅಂಗಡಿಯಲ್ಲಿ ಸಾರಾಯಿ ಕುಡಿಯುವ ವಿಡಿಯೋ ಇರುತ್ತದೆ. ಮತ್ತೊಂದು ವಿಡಿಯೋ ತುಣುಕಿನಲ್ಲಿ ಶಿವನಗೌಡ (ಮೃತ) ಮತ್ತು ರುದ್ರಪ್ಪ (1ನೇ ಆರೋಪಿ) ಇವರು ಹಿರೇಬಾಗೇವಾಡಿಯ ಗೊಬ್ಬರದ ಅಂಗಡಿಗೆ ಹೋಗಿ ಕಳೆನಾಶಕ ಔಷಧ ಮತ್ತು ಒಂದು ಪೌಡರ ಪ್ಯಾಕೇಟ ಖರೀದಿಸಿರುವುದು ಕಂಡುಬರುತ್ತದೆ. ಮತ್ತೊಂದು ವಿಡಿಯೋ ತುಣುಕಿನಲ್ಲಿ ಬಡಸ ಗ್ರಾಮದ ನವದುರ್ಗ ವೈನ ಶಾಪನಲ್ಲಿ ರುದ್ರಪ್ಪ ಮತ್ತು ಶಿವನಗೌಡ ಸಾರಾಯಿ ಕುಡಿಯುವ ವಿಡಿಯೋ ಇರುತ್ತದೆ.

4. ನಂತರ pendriveನ್ನು ತೆರೆದ ನ್ಯಾಯಾಲಯದಲ್ಲಿ ಅಳವಡಿಸಿದ ಕಂಪ್ಯೂಟರ ಸಿಸ್ಟಮಗೆ ಅಳವಡಿಸಿ ಪ್ಲೇ ಮಾಡಲಾಗಿರುತ್ತದೆ. Pendriveನಲ್ಲಿ ಒಟ್ಟು ಸಿಸಿಟಿವಿ ಫೂಟೇಜ ಎಂದು ನಮೂದು ಇರುವ ಫೋಲ್ಡರನ್ನು ಓಪನ ಮಾಡಿದ್ದು ಸದರಿ ಫೋಲ್ಡರನಲ್ಲಿ ಒಟ್ಟು 4 ಫೋಲ್ಡರಗಳು ಇರುತ್ತವೆ.

**1. ಮೊದಲಿನ ಫೋಲ್ಡರನ ಹೆಸರು ಪ್ರಗತಿ ವೈನ್ಸ , ಹಿರೇಬಾಗೇವಾಡಿ** ಎಂದು ನಮೂದು ಇದ್ದು, ಸದರಿ ಫೋಲ್ಡರನ್ನು ಓಪನ ಮಾಡಿದಾಗ ಈ ಕೆಳಗಿನ ದೃಶ್ಯಾವಳಿಗಳು ಕಂಡುಬಂದಿರುತ್ತದೆ.

- ಸದರಿ ವಿಡಿಯೋದಲ್ಲಿ ದಿನಾಂಕ 01.04.2025ರ 14:33:01 ಗಂಟೆಯಿಂದ 14:33:36 ಗಂಟೆಯ ಅವಧಿಯಲ್ಲಿ 1ನೇ ಆರೋಪಿಯು 4 ಟೆಟ್ರಾ ಪ್ಯಾಕೇಟಗಳನ್ನು ಖರೀದಿ ಕಪ್ಪು ಬಣ್ಣದ ಪ್ಲಾಸ್ಟಿಕ ಚೀಲವನ್ನು ತೆಗೆದುಕೊಂಡು ಹೋಗಿರುವುದು ಮತ್ತು ಅವನ ಬಲಗಡೆ ನಿಂತಿರುವ ವ್ಯಕ್ತಿಯ ಬಲಗಡೆ ಇನ್ನೊಬ್ಬ ವ್ಯಕ್ತಿ ನಿಂತಿರುತ್ತಾನೆ. ಟೆಟ್ರಾ ಪ್ಯಾಕೇಟ ಖರೀದಿಸಿದವನು 1ನೇ ಆರೋಪಿ ಮತ್ತು ಚೌಕಳಿ ಅಂಗಿ ತೊಟ್ಟು ಹೆಗಲ ಮೇಲೆ ಟಾವೆಲ್ ಹಾಕಿಕೊಂಡ ವ್ಯಕ್ತಿ ಮೃತ ಶಿವನಗೌಡ ಇರುತ್ತಾನೆ ಎಂದು ಸಾಕ್ಷಿ ಹೇಳಿರುತ್ತಾರೆ.

**2. ಎರಡನೇಯ ಫೋಲ್ಡರನ ಹೆಸರು ವಿಜಯಲಕ್ಷ್ಮೀ ಅಗ್ರೋ ಏಜೆನ್ಸಿ, ಹಿರೇಬಾಗೇವಾಡಿ** ಎಂದು ನಮೂದು ಇದ್ದು, ಸದರಿ ವಿಡಿಯೋ 25 ನಿಮಿಷ 51 ಸೆಕೆಂಡುಗಳ ಅವಧಿಯ ವಿಡಿಯೋ ಇರುತ್ತದೆ. ಸದರಿ ಫೋಲ್ಡರನ್ನು ಓಪನ ಮಾಡಿದಾಗ ಈ ಕೆಳಗಿನ ದೃಶ್ಯಾವಳಿಗಳು ಕಂಡುಬಂದಿರುತ್ತದೆ.

- ದಿನಾಂಕ 27.03.2025ರ 10:11:42 ಗಂಟೆ ಸಮಯದಲ್ಲಿ ಇಬ್ಬರು ವ್ಯಕ್ತಿಗಳು ಅಂಗಡಿಗೆ ಬಂದಿರುವುದು ಕಳೆನಾಶಕ ಬಾಟಲಿ ಮತ್ತು ಪ್ಯಾಕೇಟನ್ನು ತೆಗೆದುಕೊಂಡು ಅಂಗಡಿಯವನ ಜೊತೆಗೆ ಮಾತನಾಡಿ ಫೋನಪೇ ಮೂಲಕ ಹಣ ಸಂದಾಯ ಮಾಡಲು ಪ್ರಯತ್ನಿಸಿ ನಗದು ಹಣವನ್ನು ಕೊಟ್ಟು ಪ್ಯಾಟೇಟ ಮತ್ತು ಬಾಟಲಿಯನ್ನು ನೀಲಿ ಕವರನಲ್ಲಿ ಹಾಕಿ ತೆಗೆದುಕೊಂಡು 10:34:48 ಗಂಟೆಯ ಸಮಯದಲ್ಲಿ ಹೊರಗೆ ಹೋಗಿರುವುದು ಕಂಡುಬಂದಿರುತ್ತದೆ. ಹಣ ಸಂದಾಯ ಮಾಡಿದವನು 1ನೇ ಆರೋಪಿ ರುದ್ರಪ್ಪ ಮತ್ತು ಪ್ಯಾಕೇಟ ಮತ್ತು ಬಾಟಲಿಯನ್ನು ಕವರನಲ್ಲಿ ಹಾಕಿಕೊಂಡವನು ಮೃತ ಶಿವನಗೌಡ ಎಂದು ಸಾಕ್ಷಿಯು ಹೇಳಿರುತ್ತಾರೆ.

**3. ಮೂರನೇಯ ಫೋಲ್ಡರನ ಹೆಸರು ನಿಯಾಜ್ ಹೋಟೇಲ ಬೆಳಗಾವಿ ಎಂದು** ನಮೂದು ಇದ್ದು, ಸದರಿ ವಿಡಿಯೋ 49 ನಿಮಿಷ 39 ಸೆಕೆಂಡುಗಳ ಅವಧಿಯ ವಿಡಿಯೋ ಇರುತ್ತದೆ. ಸದರಿ ಫೋಲ್ಡರನ್ನು ಓಪನ ಮಾಡಿದಾಗ ಈ ಕೆಳಗಿನ ದೃಶ್ಯಾವಳಿಗಳು ಕಂಡುಬಂದಿರುತ್ತದೆ.

- ದಿನಾಂಕ 01.04.2025ರ 15:51:43 ಗಂಟೆ ಸಮಯದಲ್ಲಿ ಇಬ್ಬರು ವ್ಯಕ್ತಿಗಳು ಎಂಟರ ಆಗಿರುವುದು ಕಂಡುಬರುತ್ತದೆ. ಸದರಿ ವ್ಯಕ್ತಿಗಳು ಊಟ ಮಾಡಿ ನಂತರ ಬಿಳಿ ಬಣ್ಣದ ಪ್ಲಾಸ್ಟಿಕ ಕವರನಲ್ಲಿ ಊಟವನ್ನು ಪಾರ್ಸಲ ತೆಗೆದುಕೊಂಡು 16:12:20 ಗಂಟೆ ಸಮಯದಲ್ಲಿ ಟೇಬಲ ಕೌಂಟರನಿಂದ ಹೊರಗೆ ಹೋಗಿರುವುದು ಕಂಡುಬರುತ್ತದೆ. ನಂತರ 16:14:10 ಗಂಟೆ ಸಮಯದಲ್ಲಿ ಬಿಲ್ ಕೊಟ್ಟು ಹೋಗಿರುವುದು ಕಂಡುಬರುತ್ತದೆ. ಪಾರ್ಸಲ ಕೈಯಲ್ಲಿ ಹಿಡಿದುಕೊಂಡು ಬಿಲ್ ಕೊಟ್ಟ ವ್ಯಕ್ತಿ 1ನೇ ಆರೋಪಿ ರುದ್ರಪ್ಪ ಮತ್ತು ಇನ್ನೊಬ್ಬ ವ್ಯಕ್ತಿ ಮೃತ ಶಿವನಗೌಡ ಎಂದು ಸಾಕ್ಷಿಯು ಹೇಳುತ್ತಾರೆ.

**4. ನಾಲ್ಕನೇಯ ಫೋಲ್ಡರನ ಹೆಸರು ಶ್ರೀ ನವದುರ್ಗಾ ಬಾರ್ ಆ್ಯಂಡ ರೆಸ್ಟೋರೆಂಟ ಬಡಸ ಕ್ರಾಸ** ಎಂದು ನಮೂದು ಇದ್ದು, ಸದರಿ ವಿಡಿಯೋದಲ್ಲಿ ಒಟ್ಟು 4 ತುಣುಕುಗಳು ಇರುತ್ತವೆ. ಸದರಿ ವಿಡಿಯೋ ತುಣುಕುಗಳು ದಿನಾಂಕ 01.04.2025ರ ವಿಡಿಯೋಗಳು ಇರುತ್ತವೆ.

1. ಮೊದಲನೇ ವಿಡಿಯೋ ತುಣುಕು ಒಟ್ಟು 3 ನಿಮಿಷ 34 ಸೆಕೆಂಡುಗಳ ಅವಧಿಯ ವಿಡಿಯೋ ಇರುತ್ತದೆ. ಸದರಿ ಫೈಲನ್ನು ಓಪನ ಮಾಡಿದಾಗ ಈ ದೃಶ್ಯಾವಳಿಗಳು ಕಂಡುಬಂದಿರುತ್ತದೆ. ಸದರಿ ವಿಡಿಯೋದಲ್ಲಿ 06:36:57 ಸಮಯದಲ್ಲಿ ಬೈಕ ಮೇಲೆ ಇಬ್ಬರು ವ್ಯಕ್ತಿಗಳು ಬಂದಿದ್ದು, ಬೈಕ ರೈಡ ಮಾಡುತ್ತಿರುವ ವ್ಯಕ್ತಿ 1ನೇ ಆರೋಪಿ ರುದ್ರಪ್ಪ ಮತ್ತು ಹಿಂದೆ ಕುಳಿತ ವ್ಯಕ್ತಿ ಮೃತ ಶಿವನಗೌಡ ಇರುತ್ತಾನೆ ಅವರು ಬಾರನ ಮುಂದೆ ಮಾತನಾಡುತ್ತಿರುವ ದೃಶ್ಯ ಕಂಡುಬರುತ್ತದೆ.

2. ಎರಡನೇ ವಿಡಿಯೋ ತುಣುಕು 05 ನಿಮಿಷ 59 ಸೆಕೆಂಡುಗಳ ಅವಧಿಯ ವಿಡಿಯೋ ಇರುತ್ತದೆ. ಸದರಿ ಫೈಲನ್ನು ಓಪನ ಮಾಡಿದಾಗ ಈ ದೃಶ್ಯಾವಳಿಗಳು ಕಂಡುಬಂದಿರುತ್ತದೆ. ಸದರಿ ವಿಡಿಯೋದಲ್ಲಿ 07:42:23 ಸಮಯಕ್ಕೆ

1ನೇ ಆರೋಪಿ ಮತ್ತು ಮೃತ ಹೋಗಿರುವುದು ಕಂಡುಬಂದಿರುತ್ತದೆ. ಅದಕ್ಕೂ ಮೊದಲು 1ನೇ ಆರೋಪಿ ಮತ್ತು ಮೃತನು ಬೈಕನ ಹತ್ತಿರ ಮಾತನಾಡುತ್ತಿರುವುದು ಕಂಡುಬಂದಿರುತ್ತದೆ.

3. ಮೂರನೇ ವಿಡಿಯೋ ತುಣುಕು 03 ನಿಮಿಷ 26 ಸೆಕೆಂಡುಗಳ ಅವಧಿಯ ವಿಡಿಯೋ ಇರುತ್ತದೆ. ಅದು ಕ್ಯಾಮರಾ ನಂ.7ರ ವಿಡಿಯೋ ಇರುತ್ತದೆ. ಸದರಿ ಫೈಲನ್ನು ಓಪನ ಮಾಡಿದಾಗ ಈ ದೃಶ್ಯಾವಳಿಗಳು ಕಂಡುಬಂದಿರುತ್ತದೆ. ಸದರಿ ವಿಡಿಯೋದಲ್ಲಿ 06:43:53 ಸಮಯಕ್ಕೆ 1ನೇ ಆರೋಪಿ ಮತ್ತು ಮೃತ ಬಾರನ ಕೌಂಟರ ಹತ್ತಿರ ಬಂದಿರುವುದು ಕಂಡುಬಂದಿರುತ್ತದೆ. ನಂತರ 1ನೇ ಆರೋಪಿ ಹಣ ಕೊಟ್ಟು ಕಪ್ಪು ಬಣ್ಣದ ಪ್ಲಾಸ್ಟಿಕ ಚೀಲವನ್ನು ತೆಗೆದುಕೊಂಡು 06:45:50 ಸಮಯಕ್ಕೆ ಹೋಗಿರುವುದು ಕಂಡುಬಂದಿರುತ್ತದೆ.

4. ನಾಲ್ಕನೇ ವಿಡಿಯೋ ತುಣುಕು 06 ನಿಮಿಷ ಅವಧಿಯ ವಿಡಿಯೋ ಇರುತ್ತದೆ. ಅದು ಕ್ಯಾಮರಾ ನಂ.7ರ ವಿಡಿಯೋ ಇರುತ್ತದೆ. ಸದರಿ ಫೈಲನ್ನು ಓಪನ ಮಾಡಿದಾಗ ಈ ದೃಶ್ಯಾವಳಿಗಳು ಕಂಡುಬಂದಿರುತ್ತದೆ. ಸದರಿ ವಿಡಿಯೋದಲ್ಲಿ 07:37:37 ಸಮಯಕ್ಕೆ 1ನೇ ಆರೋಪಿ ಪುನಃ ಕೌಂಟರ ಹತ್ತಿರ ಬರುವುದು ನಂತರ ಬಾಟಲಿಯೊಂದನ್ನು ಕರಿಬಣ್ಣದ ಪ್ಲಸ್ಟಿಕ ಚೀಲದಲ್ಲಿ ಹಾಕಿಕೊಂಡು ಅದನ್ನು ಕೈಯಲ್ಲಿ ಹಿಡಿದುಕೊಂಡು 07:39:48 ಸಮಯದಲ್ಲಿ ಹೊರಗೆ ಹೋಗಿರುವುದು ಕಂಡುಬಂದಿರುತ್ತದೆ.

5. ವಿಡಿಯೋಗಳನ್ನು ಪ್ಲೇ ಮಾಡಿ ನಾವು ಅವುಗಳನ್ನು ನೋಡಿದ ನಂತರ pendriveನ್ನು ಪುನಃ ಪ್ಯಾಕ ಮಾಡಿ ನಮ್ಮ ಸಹಿ ಪಡೆದಿರುತ್ತಾರೆ. ಆ ಸಮಯದಲ್ಲಿ ಎರಡು ಪೋಟೋಗಳನ್ನು

ತೆಗೆಸಿರುತ್ತಾರೆ. ಸಾಕ್ಷಿಯು ಎರಡು ಪೋಟೋಗಳನ್ನು ನೋಡಿ ಗುರುತಿಸಿದ ಮೇರೆಗೆ, ಸದರಿ ಪೋಟೋಗಳನ್ನು ನಿಪಿ-34 ಮತ್ತು 35 ಎಂದು ಗುರುತಿಸಲಾಯಿತು.

**ನ್ಯಾಯಾಲಯದ ಸಮಯ ಮುಗಿದ ಕಾರಣ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಖ್ತಲೇಖದ ಅನ್ವಯ ಬೆರಳಚ್ಚುಗಾರರು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ ಪಡೆದುಕೊಳ್ಳಲಾಯಿತು)

ಓ ಹೇ ಕೆ ಸರಿ ಇದೆ.

(ಸುಭಾಷ ಸಂಕದ)
1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಬೆಳಗಾವಿ.